ಕಾಡಿಗೆ ಕಣ್ಣು

**ಕಲೀಮ್ ಉಲ್ಲಾ**



# ವಜ್ರದ ಕಣ್ಣುಗಳ ಕಾಡುಪಾಪ

ಮರವನ್ನು ನಿಧಾನಕ್ಕೆ ಸ್ಲೋ ಮೋಶನ್‌ನಲ್ಲಿ ಹತ್ತಿ ಹೋಗುವ ಕಾಡುಪಾಪದ ಚೆಂದವನ್ನು ನೋಡಿಯೇ ಅನುಭವಿಸಬೇಕು. ಅದರ ಕೋಮಲ ದೇಹ ಕೆಲವೊಮ್ಮೆ ರಬ್ಬರಿನಂತೆ ಹಿಗ್ಗುತ್ತದೆ. ವಜ್ರದಂತೆ ಹೊಳೆಯುವ ಅದರ ನಯನಗಳು ವಜ್ರದ ಹೊಳಪನ್ನು ನಾಚಿಸುವಂತಹವು.

ಒಂದು ರಾತ್ರಿ ಗೆಳೆಯ ಪ್ರಸನ್ನ ಕೆಸಲೂರು ಅವರ ಮನೆಗೆ ಹೊರಟಿದ್ದೆ. ಮಲೆನಾಡಿನ ಕಚ್ಚಾ ರಸ್ತೆಯ ಮೇಲೆ ಹೋಗುವಾಗ ದಾರಿಯನ್ನೇ ದಿಟ್ಟಿಸಿಕೊಂಡು ಹೋಗುವುದು ನನಗೀಗ ಅಭ್ಯಾಸವಾಗಿ ಹೋಗಿದೆ. ಇದಕ್ಕೆ ಕಾರಣ ಹಾವೋ, ನರಿಯೋ, ಹುಲಿ, ಚಿರತೆಯೋ ಕಂಡರೂ ಕಾಣಲಿ ಎಂಬ ದುರಾಸೆಯೇ ಹೊರತು ಮತ್ತೇನಿಲ್ಲ. ನನ್ನ ನಿರೀಕ್ಷೆ ನಿಜವಾಗುವಂತೆ ಕಾರಿನ ಬೆಳಕಿಗೆ ಅಡ್ಡಲಾಗಿ ವಿಚಿತ್ರ ಜೀವಿಯೊಂದು ಅಚಾನಕ್ಕಾಗಿ ಬಂದು ನಿಂತಿತು. ನನಗೆ ಆ ಕ್ಷಣ ಗಾಬರಿಯಾಗಿ ಸರ್ರೆಂದು ಬ್ರೇಕು ಹಾಕಿ ಕಾರನ್ನು ನಿಲ್ಲಿಸಿ ಬಿಟ್ಟೆ. ಅದು ನೋಡಲು, ತಪ್ಪಿಸಿಕೊಂಡು ಓಡಾಡುವ ಎಳೆ ಮಗುವಿನಂತೆ ಕಾಣುತ್ತಿತ್ತು. ಯಾರದ್ದೋ ಮನೆಯ ತೊಟ್ಟಿಲಿನ ಕಂದನೊಂದು ಎದ್ದು ಬಂದು ತಿಣುಕಾಡಿ ಸಾಗುವಂತೆ ಅದು ನಿಧಾನಕ್ಕೆ ಚಲಿಸುತ್ತಿತ್ತು. ಅದರ ಕೈ ಕಾಲುಗಳು ನಡುಗುತ್ತಿದ್ದವು. ಕಣ್ಣು ನಕ್ಷತ್ರದಂತೆ ಹೊಳೆಯುತ್ತಿದ್ದವು.

ಈ ಕಾಡಿನಲ್ಲಿ ಅನೇಕ ಸಲ ಹಗಲು ರಾತ್ರಿ ಸುತ್ತಾಡಿದ್ದರೂ ಈ ಬಗೆಯ ಜೀವವನ್ನು ಕಾಣಲಾಗಿರಲಿಲ್ಲ. ಸಾವಕಾಶವಾಗಿ ನನ್ನನ್ನೇ ದುರುಗುಟ್ಟಿ ನೋಡಿಕೊಂಡು ಗಿಡಗಳ ಒಳಗೆ ಅದು ಇಳಿದು ಕಣ್ಮರೆಯಾಯಿತು. ಕ್ಯಾಮೆರಾ ಇದ್ದರೂ ಗಡಿಬಿಡಿಯಲ್ಲಿ ಅದರ ಫೋಟೊ ಕೂಡ ತೆಗೆಯಲು ಆಗಲಿಲ್ಲ. ಸೋಜಿಗ ಮತ್ತು ಗಾಬರಿಯಲ್ಲಿದ್ದ ನನಗೆ ಅದು ಮುಖದರ್ಶನ ಕೊಟ್ಟಿದ್ದು ಕೇವಲ ಒಂದು ನಿಮಿಷ ಮಾತ್ರ.

ಮಾರನೆಯ ದಿನ ಹೇಗಾದರೂ ಇದನ್ನು ಪತ್ತೆ ಮಾಡಿ ಒಂದಾದರೂ ಪಟ ತೆಗೆಯಲೇಬೆಂಕೆಂಬ ತಲಬು ಹಚ್ಚಿಕೊಂಡು ಕಾಡಿನ ಮೂಲೆಮೂಲೆ ಸುತ್ತಿದೆ. ಎಲ್ಲೂ ಅದರ ಸುಳಿವು ಸಿಗಲಿಲ್ಲ. ಹಗಲಿನಲ್ಲಿ ಅದನ್ನು ನೋಡುವುದು ಸಾಧ್ಯವಿಲ್ಲವೆಂದೂ, ರಾತ್ರಿ ಹೊತ್ತು ಮಾತ್ರ ತಿರುಗಾಡುವ ಇದು ನಿಶಾಚರಿಯೆಂದೂ, ಆ ಹಳ್ಳಿಯ ಜನ ಹೇಳಿದರು. ಮಾಟ ಮಂತ್ರ ಮಾಡುವವರು ಇವನ್ನು ಹಿಡಿದು ಕೊಲ್ಲುತ್ತಾರೆ ಎಂಬ ಆಘಾತದ ಸಂಗತಿಯನ್ನೂ ಅವರು ಕೊನೆಯಲ್ಲಿ ಸೇರಿಸಿದರು. ಇದನ್ನು ನೋಡುವುದು ಅಪಶಕುನವೆಂದೂ, ನೋಡಿದ ಒಂದು ವರ್ಷದೊಳಗೆ ಏನಾದರೂ ಅನಾಹುತ ಆಗೇ ತೀರುವುದೆಂದು ನನಗೆ ಅರಣ್ಯ ತೋರಿಸಲು ಬಂದಿದ್ದ ರಾಮಣ್ಣ ಭವಿಷ್ಯ ನುಡಿದರು. ಮುದ್ದಾದ ಪಿಳಿಪಿಳಿ ಕಣ್ಣಿನ ಈ ಜೀವಕ್ಕೆ ಕಾಡುಪಾಪ ಎನ್ನುತ್ತಾರೆ.